# <u>ಕೆರೆಯ ನೀರನ್ನು ಕೆರೆಗೆ ಚೆಲ್ಲಿ</u>

ಕೆರೆಯ ನೀರನ್ನು ಕೆರೆಗೆ ಚೆಲ್ಲಿ ವರವ ಪಡೆದಂತೆ ಕಾಣಿರೊ.

ಏನಿದರ ಅರ್ಥ?

**೧ ಕೆರೆ -** ಪರಮಾತ್ಮನ ಸಂಕೇತ.  ಸರ್ವಾಶರಯ ಹರಿ.

ನೀರು - ತೀರ್ಥ - ಸತ್ ಶಾಸ್ತ್ರದ ಸಂಕೇತ.

ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಅಂದರೆ ಸತ್ ಶಾಸ್ತ್ರ ಓದಬೇಕು. ಸದಾಚಾರ ಕಲಿಯಬೇಕು. ಹರಿ ಮಹಾತ್ಮೆಯ ಜ್ಞಾನ ಪಡೆಯಬೇಕು. ಆ ಜ್ಞಾನವನ್ನು ಭಕ್ತಿಯಿಂದ ಹರಿಗೆ ಸಮರ್ಪಿಸಬೇಕು. ಹರಿಯ ಅನುಗ್ರಹ ಎಂಬ ವರವ ಪಡೆಯಬೇಕು

**೨ ನೀರು,-** ವಾಯು, ಆಕಾಶ, ಅಗ್ನಿ, ಪೃಥ್ವಿ, ಮತ್ತು ನೀರು.  ಆದಿ ಪಂಚಭೂತಗಳ ಪ್ರತೀಕ.

ನಾವು ಪಂಚಭೂತ ಮಯ.  ನಮ್ಮ ದೇಹ ಪಂಚಭೂತಗಳಿಂದ ಆದದ್ದು.  ನಮ್ಮ ಸುತ್ತಮುತ್ತ ಎಲ್ಲವೂ ಪಂಚಭೂತಗಳಿಂದಲೇ.  ಮನೆ ಮಠ ಧನ ಕನಕ ಸಂಪತ್ತು ಸಿರಿ ಎಲ್ಲವೂ ಪಂಚಭೂತ ಕೃತ.  ಹುಟ್ಟುವಾಗ ನಾವು ಈ ಸಂಪತ್ತು ತಂದಿಲ್ಲ ಹೋಗುವಾಗ ಒಯ್ಯುವುದಿಲ್ಲ.

ಇದು ಕೆರೆಯ ನೀರು.

ಕೆರೆ ಎಂದರೆ ಪರಮಾತ್ಮ.  ಸಕಲಕ್ಕೂ ಆಶ್ರಯ. ಪರಮಾತ್ಮನ ಸಂಪತ್ತು.  ಈ ಎಲ್ಲ ಸಂಪತ್ತನ್ನು ಸತ್ಕಾರ್ಯಗಳಲ್ಲಿ, ಹರಿಪೂಜೆಯಲ್ಲಿ, ದಾನ ಧರ್ಮ ಯಜ್ಞಗಳಲ್ಲಿ, ಚೆಲ್ಲಿ.  ಹರಿ ಅನುಗ್ರಹ ಎಂಬ ಅಮೂಲ್ಯ ಸಂಪತ್ತು - ವರವ ಪಡೆಯಿರಿ.

**೩  ನೀರು -** ಕರ್ಮಗಳ ಸತ್ಕರ್ಮಗಳ ಸಂಕೇತ.  ಅಪಃ- ಕರ್ಮಃ.

ಸತ್ಕರ್ಮಗಳು ಅಂದರೆ ಶಾಸ್ತ್ರದ ಅಧ್ಯಯನ ಅಧ್ಯಾಪನ ಹರಿನಾಮ ಶ್ರವಣ, ಸ್ಮರಣ, ಧ್ಯಾನ ಮನನ, ತಂದೆ ತಾಯಿ ಗುರು ಹಿರಿಯರ ಸೇವೆ, ನಮಗೆ ಉಚಿತ ಕರ್ಮಗಳ ನಿರ್ವಹಣೆ, ಸಮಾಜ ಸೇವೆ ಮೊದಲಾದ ಈ ಎಲ್ಲ ಸತ್ಕರ್ಮಗಳನ್ನು ಮಾಡಿ ನೀರಿನ ಅಂದರೆ ಕರ್ಮಗಳ ಮಾಲಕ

ಪರಮಾತ್ಮನಿಗೆ ಚೆಲ್ಲಿ ಅಂದರೆ ಸಮರ್ಪಿಸಿ. ಹರಿಪ್ರಸಾದ ಎಂಬ ವರ ಪಡೆದು ಮೋಕ್ಷವನ್ನು ಹೊಂದಿ.

**೪ ನೀರು** ಎಂದರೆ ಈ ಶರೀರ

ಈ ಶರೀರದ ಬಹುಭಾಗ ನೀರು ವ್ಯಾಪಿಸಿದೆ. ರಕ್ತಾದಿ ಧಾತುಗಳು ನೀರಿನಿಂದಲೇ ಆಗಿವೆ. ನೀರು ಇಲ್ಲದ ಈ ಶರೀರ ನಿಲ್ಲಲು ಸಾಧ್ಯವಿಲ್ಲ. ಹಾಗಾಗಿ ನೀರು ಎಂದರೆ ಶರೀರ. ಶರೀರವೇತಕ್ಕೆ ? ಸಾಧನದ ಶರೀರವಿದು ನೀ ದಯದಿ ಕೊಟ್ಟದ್ದು ಪರಮಾತ್ಮ ಈ ಶರೀರವನ್ನು ನಮಗೆ ಬಾಡಿಗೆ ಕೊಟ್ಟಿದ್ದಾನೆ.

ಕೆರೆಯ ನೀರನ್ನು ಕೆರೆಗೆ ಚೆಲ್ಲಬೇಕು. ಸಾಧನೆ ಎಂಬ ಬಾಡಿಗೆಯನ್ನು ಸಲ್ಲಿಸಬೇಕು.

ಹರಿ ಅನುಗ್ರಹ ಎಂಬ ವರ ಪಡೆಯಬೇಕು.

**೫ ನೀರು -** ಸಂಸಾರದ ಸಂಕೇತ. ಯಾಕೆಂದರೆ ಎರಡೂ ಸದಾ ಮುಂದೆ ಹರಿಯುತ್ತಿರುತ್ತವೆ. ನೀರು ನಿಂತಲ್ಲೇ ನಿಲ್ಲುವುದಿಲ್ಲ. ಸಂಸಾರವೂ ಸಹ ನಿನ್ನೆಯಂತೆ ಇಂದಿಲ್ಲ. ಇಂದಿನಂತೆ ನಾಳೆ ಇಲ್ಲ. ಮುಂದೆ ನಡೆಯುತ್ತಿರುತ್ತವೆ.

ಸಂಸಾರವನ್ನೇ, ಯಜಮಾನನಾದ ಪರಮಾತ್ಮನತ್ತ ಚೆಲ್ಲಿ ಅಂದರೆ ಸಮರ್ಪಣೆ ಮಾಡಿ.

ಸಂಸಾರ ಎಂದರೆ ಸಕಲವನ್ನೂ ಮನೆ, ಮಠ, ಮಡದಿ, ಮಕ್ಕಳು, ಸಿರಿ ಸಂಪತ್ತು ಎಲ್ಲವೂ ಪರಮಾತ್ಮ ಕೊಟ್ಟಿದ್ದು. ನಾನು ಸಹ ಅವನವನೇ. ನನ್ನದೆಂಬುವುದು ಏನೂ ಇಲ್ಲ ಪರಮ ವಿರಕ್ತಿ ಮಾಡಿ.

ಶ್ರೀಹರಿಯಲ್ಲಿ ಸರ್ವ ಶರಣಾಗತಿ ಹೊಂದಿ. ಇದೆ ಕೆರೆಯ ನೀರನ್ನು ಕೆರೆಗೆ ಚೆಲ್ಲುವುದು. ರಕ್ಷಿಸುತ್ತಾನೆ ಎಂಬ ವಿಶ್ವಾಸ. ನಾನು ಅವನವನು ಅವನು ನನ್ನವನು ಎಂಬ ದೇವರಲ್ಲಿ ನಂಬಿಕೆ.

ಮತ್ತು ಸರ್ವ ಶರಣಾಗತಿ ಇವು ಮೋಕ್ಷಕ್ಕೆ ಸಾಧನ ಎಂಬ ಅಮೂಲ್ಯ ವರವನ್ನು ಪಡೆಯಿರಿ.

ಶ್ರೀ ಕೃಷ್ಣಾರ್ಪಣಮಸ್ತು

**ಲೇಖಕರು: ಡಾ ವಿಜಯೇಂದ್ರ ದೇಸಾಯಿ.**